ಪರಿಣಾಮ ಬೀರುತ್ತದೆಂಬ ಕಾರಣಕ್ಕಾಗಿ, ಆ ಆದೇಶಗಳ ಜಾರಿಗೊಳಿಸುವಿಕೆಯನ್ನು ಪ್ರಸಕ್ತ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಅಂದರೆ, ದಿನಾಂಕ 10–04–2007 ರವರೆಗೆ ತಡೆಹಿಡಿಯತಕ್ಕದೆಂದು ಸರ್ಕಾರದ ದಿನಾಂಕ 6–11–2006 ಆದೇಶ ಸಂಖ್ಯೆ, ಇಡಿ 203 ಪಿಜಿಸಿ 2006 ರನ್ವಯ ಆದೇಶಿಸಲಾಗಿದೆ

ಅನಧಿಕೃತ ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮಕ್ಕಳಿಗೆ, ಮುಂದಿನ ಶೈಕ್ಷಣಿಕ ಸಾಲಿನಿಂದ ಸದರಿ ಶಾಲೆಗಳ ಸುತ್ತಮುತ್ತಲಿನ ಸರ್ಕಾರಿ ಶಾಲೆಗಳು, ಅನುದಾನಿತ ಶಾಲೆಗಳು ಹಾಗೂ ಅನುದಾನರಹಿತ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾಭ್ಯಾಸ ಮುಂದುವರೆಸಲು ಪರ್ಯಾಯ ವ್ಯವಸ್ಥೆ ಕಲ್ಪಿಸಲು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ ತಿಳಿಸಲಾಗಿದೆ

ಉ) ಈ ಶಾಲೆಗಳ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ

1642 (1837) ಶ್ರೀ ವಿ ಸೋಮಣ್ಣ (ಬಿನ್ನಿಪೇಟೆ) – ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ಸಿ ಇ ಟಿ ಘಟಕದಲ್ಲಿ ಖಾಯಂ ಹಾಗೂ ಒಪ್ಪಂದದ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಖ್ಯೆ ಎಷ್ಟು,

ಆ) ಈ ಸಿಬ್ಬಂದಿಗೆ ಪ್ರತಿ ತಿಂಗಳು ನೀಡುವ ವೇತನವೆಷ್ಟು,

ಇ) ಈ ಸಿಬ್ಬಂದಿ ಸಿ ಇ ಟಿ ನಡೆಯುವ ವೇಳೆಯಲ್ಲಿ 10–12 ಘಂಟೆಗಳ ಕಾಲ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಈ) ಪ್ರತಿವರ್ಷ ಸಿ ಇ ಟಿ ಘಟಕಕ್ಕೆ ವಿದ್ಯಾರ್ಥಿಗಳಿಂದ ಬರತಕ್ಕ ಹಣವೆಷ್ಟು,

ಉ) ಸಿ ಇ ಟಿ ಘಟಕದಲ್ಲಿ ವರ್ಷವಿಡಿ ಪೂರ್ವಭಾವಿ ಸಿದ್ಧತೆ ಹಾಗೂ ಇತರ ಕೆಲಸಗಳಿರುವುದರಿಂದ ಹಲವಾರು ವರ್ಷಗಳಿಂದ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ಖಾಯಂಗೊಳಿಸಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಡಿ ಹೆಚ್ ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು)

ಅ) ದಿನಾಂಕ 01–03–2007 ರಲ್ಲಿ ಇದ್ದಂತೆ ಸಿ ಇ ಟಿ ಘಟಕದಲ್ಲಿನ ಸಿಬ್ಬಂದಿ ವರ್ಗದವರ ಸಂಖ್ಯೆ ಈ ಕೆಳಕಂಡಂತಿದೆ

ಖಾಯಂ ಸಿಬ್ಬಂದಿ

01) ಅಧಿಕಾರಿ ವರ್ಗದವರು – 02

02) ಅಧಿಕಾರೇತರ ವರ್ಗದವರು –02

ಒಪ್ಪಂದದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಒಟ್ಟು ಸಿಬ್ಬಂದಿಗಳ ಸಂಖ್ಯೆ –14

ಆ) ಖಾಯಂ ಸಿಬ್ಬಂದಿ ವರ್ಗದವರಿಗೆ ಒಟ್ಟು ರೂ 78,210–00 ಹಾಗೂ ಒಪ್ಪಂದದ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದವರಿಗೆ ಒಟ್ಟು ರೂ 97,440–00 ಅನ್ನು ಪ್ರತಿತಿಂಗಳು ನೀಡಲಾಗುತ್ತಿದೆ

ಇ) ಎಲ್ಲಾ ಸಿಬ್ಬಂದಿ ವರ್ಗದವರು ಸಿ ಇ ಟಿ ಘಟಕದಲ್ಲಿ ಪರೀಕ್ಷಾ ಪೂರ್ವ ಹಾಗೂ ಪರೀಕ್ಷಾ ನಂತರದ ಅವಧಿ ಅಂದರೆ ಕೌನ್ಸಿಲಿಂಗ್ ನಡೆಯುವ ಅವಧಿಯಲ್ಲಿ ಕೆಲವು ದಿನ 8 ರಿಂದ 10 ಗಂಟೆಯವರೆಗೆ ಕಾರ್ಯನಿರ್ವಹಿಸುತ್ತಾರೆ ಈ ಹೆಚ್ಚಿನ ಅವಧಿಯ ಕೆಲಸಕ್ಕೆ ಈ ಅವಧಿಯಲ್ಲಿ ಮಾಸಿಕ ವೇತನದ ಜೊತೆಗೆ ಸಂಭಾವನೆಯನ್ನು (ರೆಮ್ಯೂನರೆಷನ್) ಸಹ ಪಾವತಿ ಮಾಡಲಾಗುತ್ತಿದೆ

ಈ) ಪ್ರತಿವರ್ಷ ಪರೀಕ್ಷಾ ಶುಲ್ಕವಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ–1 ಅಭ್ಯರ್ಥಿಗಳಿಂದ ತಲಾ ರೂ 400–00 ರಂತೆ ಹಾಗೂ ಇತರೆ ವರ್ಗದ ಅಭ್ಯರ್ಥಿಗಳಿಂದ ರೂ 550–00 ರಂತೆ ವಸೂಲಿ ಮಾಡಲಾಗುತ್ತದೆ 2006–07 ನೇ ಸಾಲಿನಲ್ಲಿ ರೂ 4 75 ಕೋಟಿ ವಸೂಲಾಗಿರುತ್ತದೆ ಈ ಮೊತ್ತ ವಿದ್ಯಾರ್ಥಿಗಳು ಸಿ ಇ ಟಿ ಪರೀಕ್ಷೆ ತೆಗೆದುಕೊಳ್ಳುವ ಸಂಖ್ಯೆಯ ಮೇಲೆ ಅವಲಂಬಿಸಿರುತ್ತದೆ

ಉ) ಸಿ ಇ ಟಿ ಘಟಕದಲ್ಲಿ ವರ್ಷ ಪೂರ್ತಿ ಪರೀಕ್ಷಾ ಪೂರ್ವ ಸಿದ್ಧತಾ ಕೆಲಸ ಇರುವುದಿಲ್ಲ ಪರೀಕ್ಷಾ ಪೂರ್ವ ಸಿದ್ಧತಾ ಕೆಲಸ ಸಿ.ಇ ಟಿ ಪರೀಕ್ಷೆಗೆ ಅರ್ಜಿಯನ್ನು

ಆಹ್ವಾನಿಸಿ ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಪ್ರಾರಂಭವಾಗುತ್ತದೆ ಸಿ ಇ ಟಿ ಪರೀಕ್ಷೆ ನಡೆದು ಫಲಿತಾಂಶ ಘೋಷಣೆ ಆಗುವವರೆಗೆ ಪರೀಕ್ಷಾ ಪೂರ್ವಕೆಲಸ ಎಂದು ಪರಿಗಣಿಸಿದ್ದು ಸೀಟು ಆಯ್ಕೆ ಅವಧಿಯನ್ನು ಪರೀಕ್ಷಾ ನಂತರದ ಅವಧಿ ಎಂದು ಪರಿಗಣಿಸಲಾಗಿದೆ ಪ್ರಸ್ತುತ ಸಾಲಿನಲ್ಲಿ ಸಿ ಇ ಟಿ ಪರೀಕ್ಷಾ ಪೂರ್ವ ಅವಧಿ ಹಾಗು ಪರೀಕ್ಷಾ ನಂತರದ ಅವಧಿ ದಿನಾಂಕ 28–01–2007 ರಿಂದ ಪ್ರಾರಂಭವಾಗಿ ದಿನಾಂಕ 03–08–2007 ಕ್ಕೆ ಮುಕ್ತಾಯವಾಗುತ್ತದೆ ಇದರಿಂದಾಗಿ ವರ್ಷವಿಡಿ ಹೆಚ್ಚಿನ ಕೆಲಸ ಒತ್ತಡವಿರುವುದಿಲ್ಲ

ಸಿ ಇ ಟಿ ಘಟಕಕ್ಕೆ ಮಂಜೂರಾದ ಹುದ್ದೆಗಳನ್ನು ನಿಯೋಜನ ಆಧಾರದ ಮೇಲೆ ಭರ್ತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿತ್ತು ಆದರೆ ಎಲ್ಲಾ ಹುದ್ದೆಗಳಿಗೆ ನಿಯೋಜನೆ ಆಧಾರದ ಮೇಲೆ ಸಿಬ್ಬಂದಿಗಳು ಲಭ್ಯವಾಗದ ಕಾರಣ ಒಪ್ಪಂದದ ಆಧಾರದ ಮೇಲೆ ನೇಮಕ ಮಾಡಿಕೊಂಡು ಮುಂದುವರೆಸಿಕೊಂಡು ಬರಲಾಗುತ್ತಿದೆ ಸಿ ಇ ಟಿ ಘಟಕಕ್ಕೆ ಹುದ್ದೆಗಳನ್ನು ಮಂಜೂರು ಮಾಡಲಾದ ನಿಯಮಗಳನ್ವಯ ನಿಯೋಜನೆ ಆಧಾರದ ಮೇಲೆಯೇ ಹುದ್ದೆಗಳನ್ನು ಭರ್ತಿ ಮಾಡಲು ಅವಕಾಶವಿರುವುದರಿಂದ ಒಪ್ಪಂದ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಗಳನ್ನು ಖಾಯಂಗೊಳಿಸಲು ಅವಕಾಶ ಇರುವುದಿಲ್ಲ

1643 (1905) ಶ್ರೀ ಸೋಮಣ್ಣ ವಿ (ಬಿನ್ನಿಪೇಟೆ) – ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಸರ್ಕಾರಿ ಪ್ರಾಥಮಿಕ ಶಾಲೆಗಳೆಷ್ಟು ಹಾಗೂ ಅವುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿ/ವಿದ್ಯಾರ್ಥಿನಿಯರೆಷ್ಟು,

ಆ) ಇವುಗಳ ಪೈಕಿ ಎಷ್ಟು ಶಾಲೆಗಳಲ್ಲಿ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ಶೌಚಾಲಯ ವ್ಯವಸ್ಥೆ ಇರುವುದಿಲ್ಲ,

ಇ) ಹಲವಾರು ಸರ್ಕಾರಿ ಶಾಲೆಗಳಲ್ಲಿ ಕೇವಲ ಉಪಾಧ್ಯಾಯರುಗಳು ಶೌಚಾಲಯವನ್ನು ಉಪಯೋಗಿಸಿಕೊಂಡು ಶಾಲಾ ಮಕ್ಕಳಿಗೆ ಶೌಚಾಲಯದ ವ್ಯವಸ್ಥೆ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,